OCTOBER 2023
ವಿತ್ತ ಸಂಚಿಕೆ


# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞ

## ಸಲಹೆ ನಮ್ಮದು ಹೂಡಿಕೆ ನಿಮ್ಮದು

**INSPIRE INDIA WEALTH PRIVATE LTD.** @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com



ಯಾರು ತಮ್ಮ ಹಣಕಾಸನ್ನು ಸರಿಯಾಗಿ ನಿರ್ವಹಿಸುವುದಿಲ್ಲವೋ ಅವರು ಕೊನೆಗೆ ಹಣಕಾಸನ್ನು ಸರಿಯಾಗಿ ನಿರ್ವಹಿಸುವವರ ಗುಲಾಮರಾಗಿ ಕೆಲಸ ಮಾಡುತ್ತಾರೆ.

–ಡೇವ್ ರಾಮ್ಸೆ



ಪ್ರತಿಯೊಂದು ಸಮಸ್ಯೆಯನ್ನು ಕೂಡ ನಿನಗೆ ದಕ್ಕಿದ ಗಿಫ್ಟ್ ಎಂದು ಭಾವಿಸು. ಸಮಸ್ಯೆ ಇಲ್ಲದೇ ಹೋದರೆ ಪ್ರಗತಿ ಸಾಧ್ಯವಿಲ್ಲ.

–ಟೋನಿ ರಾಬಿನ್ಸ್



ನಿಮ್ಮ ಕನಸಿನ ಸೌಧವನ್ನು ನಿಮಗೆ ಕಟ್ಟಲು ಸಾಧ್ಯವಾಗದೇ ಇದ್ದರೆ ಇನ್ಯಾರೋ ನಿಮ್ಮನ್ನು ನೇಮಕ ಮಾಡಿಕೊಂಡು ಅವರ ಕನಸಿನ ಸೌಧವನ್ನು ಕಟ್ಟುತ್ತಾರೆ.

–ಧೀರೂಬಾಯ್ ಅಂಬಾನಿ



# ಷೇರುಪೇಟೆ ಜಿಗಿತ: ಹೂಡಿಕೆಗಿದು ಸಕಾಲ

ಭಾರತದಲ್ಲಿ ಪ್ಯಾಂಡಮಿಕ್ ನಂತರ ಈಕ್ವಿಟಿ ಮಾರುಕಟ್ಟೆಗೆ ಹೊಸ ಆಯಾಮವೇ ಬಂದಿದೆ. ಭಾರತದ ಅರ್ಥ ವ್ಯವಸ್ಥೆ ಕೂಡ ಗಮನಾರ್ಹವಾಗಿ ಚೇತರಿಸಿಕೊಂಡಿದೆ. ದೇಶದ ಮೂಲಭೂತ ಅಂಶಗಳು ಕೂಡ ಈ ಪ್ರಗತಿಗೆ ಪೂರಕವಾಗಿವೆ. ತೀವ್ರಗತಿಯಲ್ಲಿ ಬೆಳವಣಿಗೆಯನ್ನು ಕಾಣುತ್ತಿರುವ ಆರ್ಥಿಕತೆ ಎಂಬ ಕಾರಣಕ್ಕೆ ಜಾಗತಿಕವಾಗಿಯೂ ಭಾರತಕ್ಕೆ ಉತ್ತಮ ಭವಿಷ್ಯ ಗೋಚರಿಸುತ್ತಿದೆ. ಈ ಎಲ್ಲ ಕಾರಣದಿಂದಾಗಿ ಷೇರು ಮಾರುಕಟ್ಟೆ ದಿನದಿಂದ ದಿನಕ್ಕೆ ಹೊಸ ಎತ್ತರವನ್ನು ಏರುತ್ತಿದೆ. ಕಳೆದ ಕೆಲವು ವರ್ಷಗಳ ಅವಧಿಯಲ್ಲಿ ಮಾರುಕಟ್ಟೆಗೆ ಹೊಸ ಹೊಸ ಹೂಡಿಕೆದಾರರ ಆಗಮನವಾಗಿದೆ. ಅವರೆಲ್ಲರೂ ಈಗ ಅತ್ಯುತ್ತಮವಾದ ಆದಾಯದ ಸೌಧದ ಮೇಲೆ ವಿರಾಜಮಾನರಾಗಿದ್ದಾರೆ.

ಆದರೆ ಹೊಸ ಹೂಡಿಕೆದಾರರಿಗೆ ಹಾಗೂ ಇವೆಲ್ಲವನ್ನೂ ಸಮಚಿತ್ತದಿಂದ ಕಾಯುತ್ತ ಕುಳಿತವರು ಮತ್ತು ಈಗಾಗಲೇ ಲಾಭವನ್ನೂ ಮಾಡಿರುವವರ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಮೂಡುವ ಸಾಧ್ಯತೆಗಳಿರುತ್ತವೆ. ಇದು ಇನ್ನಷ್ಟು ಹಣವನ್ನು ಹೂಡಿಕೆ ಮಾಡಲು ಸಕಾಲವೇ? ಭಾಗಶಃ ಲಾಭವನ್ನು ನಾನು ಪಡೆದುಕೊಳ್ಳಬಹುದೇ? ಈಗಿರುವ ಮಾರುಕಟ್ಟೆಯ ಪ್ರವೃತ್ತಿ ಎಷ್ಟು ದಿನಗಳ ಕಾಲ ಮುಂದುವರಿಯುತ್ತದೆ? ಈ ಮಾರುಕಟ್ಟೆಯ ಮಟ್ಟ ಅಥವಾ ಆವರ್ತನದ ಹೊರತಾಗಿಯೂ ಇಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

**ಹೂಡಿಕೆ ನಿರ್ಧಾರಗಳಿಗೆ ಸೂಕ್ತ ವಿಧಾನ:** ಮಾರುಕಟ್ಟೆಯಲ್ಲಿ ಸದ್ಯೋಭವಿಷ್ಯದಲ್ಲಿ ಏನು ಸಂಭವಿಸಲಿದೆ ಎಂದು ಕರಾರುವಕ್ಕಾಗಿ ಭವಿಷ್ಯ ನುಡಿಯಲು ನಮಗೆ ಯಾವುದೇ ನಿಯಂತ್ರಣವಿರುವುದಿಲ್ಲ. ಆದರೆ ಭಾರತದ ಆರ್ಥಿಕತೆಯ ಸುದೀರ್ಘಾವಧಿ ಭವಿಷ್ಯದ ಬಗೆಗೆ ನಮಗಿರುವ ವಿಶ್ವಾಸದ ಪ್ರಕಾರ ನಾವು ನಮ್ಮ ಹೂಡಿಕೆಯ ನಡವಳಿಕೆಗಳನ್ನು ಮತ್ತು ಹೂಡಿಕೆಯ ನಿರ್ಧಾರಗಳನ್ನು ನಿಯಂತ್ರಿಸಬಹುದು. ಹಾಗಾಗಿ ನಾವು ಯಾವುದನ್ನು ನಿಯಂತ್ರಿಸಬಹುದು ಮತ್ತು ನಮ್ಮ ಅಗತ್ಯಗಳೇನು ಎಂಬುದರ ಕಡೆಗೆ ಹೆಚ್ಚು ಗಮನ ನೀಡುವುದು ಮುಖ್ಯ. ನಮ್ಮ ಹೂಡಿಕೆ ನಿರ್ಧಾರಗಳ ಬಗೆಗೆ ಸೂಕ್ತವಾದ ನಿಲುವುಗಳನ್ನು ತಳೆಯಲು ಇಲ್ಲಿದೆ ಕೆಲವು ಸಲಹೆಗಳು:

1. **ಹಣಕಾಸು ಉದ್ದೇಶಗಳ ಮೇಲೆ ನಿಗಾ:** ಇಲ್ಲಿ ಮುಖ್ಯವಾಗಿರುವುದು ಮಾರುಕಟ್ಟೆಯ ಮಟ್ಟಗಳಲ್ಲ, ಬದಲಾಗಿ ನಮ್ಮ ಹಣಕಾಸು ಗುರಿಗಳ ವಿಚಾರದಲ್ಲಿ ನಾವು ಇಂದು ಎಲ್ಲಿ ನಿಂತಿದ್ದೇವೆ ಎಂಬುದು. ಯಾವತ್ತೂ ನಾವು ನಮ್ಮ ಹಣಕಾಸು ಹಾಗೂ ಜೀವನದ ಗುರಿಗಳ ಕಡೆಗೆ ಗಮನ ನೀಡಬೇಕು. ಹಾಗೆ ಮಾಡಿದ್ದೇ ಹೌದಾದರೆ ನಿಮ್ಮ ಅಗತ್ಯಗಳಿಗೆ ತಕ್ಕಂತೆ ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಅಗತ್ಯವಿರುವ ಹೂಡಿಕೆಗಳು, ಹೂಡಿಕೆಯ ವ್ಯಾಪ್ತಿ ಮತ್ತು ನಿಮ್ಮ ರಿಸ್ಕ್ ಪ್ರೊಫೈಲ್‌ನ ಆಧಾರದಲ್ಲಿ ಸೂಕ್ತ ಆಸ್ತಿ ವರ್ಗಗಳ ಬಗೆಗೆ ತಕ್ಷಣ ಉತ್ತರಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇಂತಹುದೊಂದು

ಒಳಪುಟ / ಒಳನೋಟ

ಹೂಡಿಕೆಯ ಅಪಾಯಗಳು: ದಾಟುವ ದಾರಿ 3



ವಿಮೆಯಲ್ಲಿ DISCLOSURE ಮಹತ್ವ 5



ಕಸರತ್ತನ್ನು ಮಾಡಿದ ಬಳಿಕ ಈಕ್ವಿಟಿಯೂ ಸೇರಿದಂತೆ ನಾನಾ ಆಸ್ತಿ ವರ್ಗಗಳ ಬಗೆಗೆ ಸ್ಪಷ್ಟವಾದ ಚಿತ್ರಣ ಲಭ್ಯವಾಗಬಹುದು. ನಿಮ್ಮ ಮತ್ತು ನಿಮ್ಮ ಬಂಡವಾಳ ಪಟ್ಟಿಯ ಸುತ್ತ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ನಿಮ್ಮ ಹಣಕಾಸು ಗುರಿಗಳ ಸ್ಥಿತಿಗತಿ ಮತ್ತು ಅದರ ಮೇಲೆ ಉಂಟಾಗಿರುವ ಪರಿಣಾಮದ ಮೇಲೆ ಸದಾ ಕಣ್ಣಿಟ್ಟಿರಬೇಕು.

2. **ಆಸ್ತಿ ಹಂಚಿಕೆಯ ಮೇಲೆ ಗಮನ:** ಸಾಮಾನ್ಯವಾಗಿ ಜನ ದೊಡ್ಡ ಚಿತ್ರದ ಮೇಲೆ ಕಣ್ಣಿಡುವುದೇ ಇಲ್ಲ. ಸಣ್ಣ ಸಣ್ಣ ವಿಷಯಗಳ ಮೇಲೆ ಹೆಚ್ಚು ಗಮನವಿಟ್ಟು ಪೌಂಡ್‌ಗಳನ್ನು ನಿರ್ಲಕ್ಷಿಸುತ್ತಾರೆ. ಪೋರ್ಟ್‌ಫೋಲಿಯೋ ಮಟ್ಟದಲ್ಲಿ ಅಥವಾ ಆರಂಭಿಕ ಮಟ್ಟದಲ್ಲಿ ಆಸ್ತಿ ಹಂಚಿಕೆಯ ವಿಧಾನವನ್ನು ಅನುಸರಿಸುವುದು ಉತ್ತಮ. ಎಲ್ಲಕ್ಕಿಂತ ಮುಖ್ಯವಾಗಿ ಸರಳ ವಿಧಾನವೇನೆಂದರೆ ಸೂಕ್ತವಾದುದೊಂದು ಆಸ್ತಿ ಹಂಚಿಕೆಯನ್ನು ಗುರುತಿಸಿ ಅದನ್ನು ಆಗಾಗ ಅಥವಾ ಮಾರುಕಟ್ಟೆಯಲ್ಲಿ ತೀವ್ರ ಏರಿಳಿತಗಳು ಕಾಣಿಸಿಕೊಂಡಾಗ ಪರಾಮರ್ಶೆ ನಡೆಸುವುದು ಉತ್ತಮ.



ನೀವು ಅರಿತಿರುವ ಸಂಗತಿಗಳು ಮತ್ತು ಅನುಭವದ ಆಧಾರದಲ್ಲಿ ಒಂದು ನಿರ್ದಿಷ್ಟವಾದ ಆಸ್ತಿ ಹಂಚಿಕೆ ವಿಧಾನವನ್ನು ಅನುಸರಿಸಬಹುದು. ಆ ಬಗ್ಗೆ ನಿಮ್ಮಲ್ಲಿ ಸ್ಪಷ್ಟತೆ ಇದ್ದರೆ ಯಾವಾಗ ಖರೀದಿ ಮಾಡಬಹುದು, ಯಾವಾಗ ಮಾರಾಟ ಮಾಡಬಹುದು ಅಥವಾ ಆಸ್ತಿಗಳ ಮರುಹೊಂದಾಣಿಕೆ ಹೇಗೆ ಮಾಡಬಹುದು ಎಂಬಂತಹ ಮಾಹಿತಿಗಳನ್ನು ಅದು ನೀಡುತ್ತ ಹೋಗುತ್ತದೆ.

3. **ಬಹುರೂಪಗಳಲ್ಲಿ ನಿಮ್ಮ ಹೂಡಿಕೆ:** ಒಮ್ಮೆ ನಿಮ್ಮ ಆಸ್ತಿ ಹಂಚಿಕೆ ನಿರ್ಧಾರವಾದರೆ ಇಂತಹ ಆಸ್ತಿ ವರ್ಗಗಳಲ್ಲಿ ಮ್ಯುಚ್ಯುಯಲ್ ಫಂಡ್‌ಗಳನ್ನು ಸೂಕ್ತ ಹೂಡಿಕೆಯ ವಾಹಕವಾಗಿ ಬಳಸಿಕೊಳ್ಳಬಹುದು. ಈ ಮ್ಯುಚ್ಯುಯಲ್ ಫಂಡ್‌ಗಳ ಲೋಕದಲ್ಲಿ ನಾನಾ ರೀತಿಯ ಫಂಡ್‌ಗಳ ಆಯ್ಕೆಯನ್ನು ಮಾಡಿಕೊಳ್ಳಲು ಅವಕಾಶವಿರುತ್ತದೆ. ಈ ರೀತಿ ಬಹುರೂಪದಲ್ಲಿ ಹೂಡಿಕೆಗಳನ್ನು ಮಾಡುವುದರಿಂದ ಕೆಲವು ನಿರ್ದಿಷ್ಟ ಸ್ವರೂಪದ ಹೂಡಿಕೆಗಳಿಂದ ಆಗುವ ಅಪಾಯಗಳನ್ನು ತಗ್ಗಿಸಬಹುದು. ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಇರುವ ಬಹುದೊಡ್ಡ ಲಾಭ ಏನೆಂದರೆ ನಿಮ್ಮ ಹೂಡಿಕೆಗಳನ್ನು ನಿಮ್ಮ ಅಗತ್ಯಗಳಿಗೆ ತಕ್ಕಂತೆ ನಿಭಾಯಿಸಲು ಸಾಧ್ಯವಿರುವುದು.

4. **ನ್ಯಾಯಯುತವಾದ ನಿರೀಕ್ಷೆಗಳಿರಲಿ:** ಒಬ್ಬ ಹೂಡಿಕೆದಾರನಾಗಿ ನೆನಪಿಟ್ಟುಕೊಳ್ಳಬೇಕಾದ ಸಂಗತಿ ಏನೆಂದರೆ ಹಿಂದೆ ಮಾಡಿದ ಸಾಧನೆ ಭವಿಷ್ಯದಲ್ಲಿ ಪುನರಾವರ್ತನೆಯಾಗದೇ ಇರಬಹುದು. ಅಲ್ಪಾವಧಿಯಲ್ಲಿ ಮಾರುಕಟ್ಟೆ ಗಡಿಯಾರದ ಲೋಲಕದಂತೆ ವರ್ತಿಸಬಹುದು. ಆದರೆ ಸುದೀರ್ಘಾವಧಿಯಲ್ಲಿ ಹಾಗಲ್ಲ, ಅದು ಹೆಚ್ಚುಕಡಿಮೆ ತೂಗುವ ಯಂತ್ರದಂತೆ ವರ್ತಿಸುತ್ತದೆ. ಜಪ್ಪಯ್ಯ ಎಂದರೂ ಕದಲುವುದಿಲ್ಲ. ಶ್ರೇಯಾಂಕಗಳು ಮತ್ತು ಆದಾಯಗಳನ್ನು ಆಧರಿಸಿದ ನಿರ್ವಹಣೆ ಕುರಿತ ಯಾವುದೇ ನಿರ್ಧಾರದಿಂದ ಹಿನ್ನೆಡೆಯಾಗಬಹುದು. ಹಾಗಾಗಿ ಹಿಂದಿನ ನಿರ್ವಹಣೆಯನ್ನು ಆಧರಿಸಿದ ನಿರೀಕ್ಷೆಗಳು ಸೂಕ್ತವಾದುದಲ್ಲ. ಹಾಗಾಗಿ ಕೇವಲ ಆದಾಯ/ ನಿರ್ವಹಣೆಯನ್ನು ನಂಬಿಕೊಳ್ಳುವುದಕ್ಕಿಂತ ಉತ್ತಮ ಆದಾಯದ ಗುಣಮಟ್ಟ ಮತ್ತು ಅದರ ನಿರಂತರತೆಯನ್ನು ನಂಬಿಕೊಳ್ಳುವುದು ಹೆಚ್ಚು ಸೂಕ್ತ.

5. **ಮಾರುಕಟ್ಟೆ ಸಮಯಕ್ಕಿಂತ ಶಿಸ್ತು ಮುಖ್ಯ:** ಮಾರುಕಟ್ಟೆಯ ಸಮಯವನ್ನು ನಿಭಾಯಿಸುವ ಸಾಮರ್ಥ್ಯ ನಿಮ್ಮ ಸುದೀರ್ಘಾವಧಿ ನಿರ್ವಹಣೆಯಲ್ಲಿ ನೀಡುವ ಕೊಡುಗೆ ಕಡಿಮೆ ಎಂಬುದು ಅನೇಕ ಅಧ್ಯಯನಗಳಿಂದ ಸಾಬೀತಾಗಿದೆ. ಹೆಚ್ಚು ಲಾಭವಾಗುವುದು ನಿಮ್ಮ ಆಸ್ತಿ ಹಂಚಿಕೆಯ ನಿರ್ಧಾರಗಳಿಂದ. ಹಾಗಾಗಿ ನಾವು ಮಾಡುವ ಹೂಡಿಕೆಗಳಲ್ಲಿ ಸದಾ ಶಿಸ್ತನ್ನು ಕಾಯ್ದುಕೊಳ್ಳಬೇಕು. ನಿರಂತರವಾಗಿ ವ್ಯವಸ್ಥಿತ ಹೂಡಿಕೆ ಯೋಜನೆಗಳಿಂದ ಮಾರುಕಟ್ಟೆಯ ಯಾವುದೇ ಹಂತದಲ್ಲಿ ಹೊಸ ಹೂಡಿಕೆಗಳನ್ನು ಮಾಡಲು ಸಾಧ್ಯವಾಗುತ್ತದೆ. ಇಂತಹುದೊಂದು ವಿಧಾನದಲ್ಲಿ ಸಮಯ ಸ್ವಯಂಚಾಲಿತವಾಗಿ ಸೇರಿಹೋಗಿದೆ. ಹಾಗಾಗಿ ಸುದೀರ್ಘಾವಧಿಯನ್ನು ಗಮನದಲ್ಲಿ ಇಟ್ಟುಕೊಂಡು ಹೂಡಿಕೆ ಮಾಡುವುದು ಉತ್ತಮ. ಅಂದರೆ ಕನಿಷ್ಠ ಏಳರಿಂದ 10 ವರ್ಷಗಳ ಅವಧಿಯ ಹೂಡಿಕೆಯನ್ನು ಆಯ್ಕೆ ಮಾಡಿಕೊಳ್ಳಿ. ಇದರಿಂದ ಆತ್ಮವಿಶ್ವಾಸದಿಂದ ಇದ್ದುಬಿಡಬಹುದು.

6. **ಎಂಎಫ್ ವಿತರಕರನ್ನು ಸಂಪರ್ಕಿಸಿ:** ನಾವು ಇಲ್ಲಿ ಅನೇಕ ಸಂಗತಿಗಳನ್ನು ಸರಳವಾಗಿ ಹೇಳಲು ಪ್ರಯತ್ನ ಮಾಡಿದರೂ ಕೂಡ ಇಂತಹ ಹೂಡಿಕೆಗಳನ್ನು ನೀವಾಗಿಯೇ ನಿಭಾಯಿಸುವುದು ಸುಲಭವಲ್ಲ. ನಮ್ಮ ಜೀವನದಲ್ಲಿ ವೈದ್ಯರಿಂದ ಲೆಕ್ಕಪರಿಶೋಧಕರ ತನಕ, ವಕೀಲರ ತನಕ, ಕೊನೆಗೆ ಮನೆಯ ಅಡುಗೆಯ ವಿಚಾರವೂ ಸೇರಿದಂತೆ ಎಲ್ಲ ಸಂಗತಿಗಳಲ್ಲಿ ವೃತ್ತಿಪರರ ಸಹಾಯ ಪಡೆಯುವಂತೆ ಮ್ಯುಚ್ಯುಯಲ್ ಫಂಡ್ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವಿತರಕರ ಸಲಹೆಯನ್ನು ಪಡೆಯುವುದು ಉತ್ತಮ. ಅವರು ನಿಮ್ಮ ಕೆಲಸವನ್ನು ಅರ್ಧಕ್ಕರ್ಧ ಕಡಿಮೆ ಮಾಡುತ್ತಾರೆ. ವಿತಕರನ ಅಥವಾ ಸಲಹೆಗಾರನ ನಿಜವಾದ ಕೆಲಸವೇನೆಂದರೆ ಕಷ್ಟದ ಕಾಲದಲ್ಲಿ ನಮ್ಮನ್ನು ಕೈಹಿಡಿದು ನಡೆಸುವುದು ಮತ್ತು ದುಬಾರಿ ಹೂಡಿಕೆ ತಪ್ಪು ಮಾಡದಂತೆ ತಡೆಯುವುದು. ನಿಮ್ಮ ವಿತರಕ ಯಾವತ್ತೂ ನಿಮ್ಮ ಪಾಲುದಾರನಿದ್ದಂತೆ, ಆತ ನಿಮ್ಮ ಪ್ರತಿಯೊಂದು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಾಥ್ ನೀಡುತ್ತಾನೆ ಮತ್ತು ನಿಮ್ಮ ಇಡೀ ಹೂಡಿಕೆಯ ಪಯಣದಲ್ಲಿ ಮ್ಯುಚ್ಯುಯಲ್ ಫಂಡ್ ಪೋರ್ಟ್‌ಫೋಲಿಯೊವನ್ನು ನಿಭಾಯಿಸುತ್ತಾನೆ.

**ಬಾಟಮ್ ಲೈನ್:** ಮುಂಬರುವ ವರ್ಷಗಳು ಮತ್ತು ದಶಕಗಳಲ್ಲಿ ಮಾರುಕಟ್ಟೆ ಇನ್ನಷ್ಟು ಎತ್ತರಕ್ಕೆ ಏರುವ ಸಾಧ್ಯತೆಗಳಿವೆ. ಈ ಅವಧಿಯಲ್ಲಿ ಕೆಲವು ಕುಸಿತಗಳೂ ಉಂಟಾಗಬಹುದು. ಆದರೆ, ಹೂಡಿಕೆದಾರರಾಗಿ ಭಾರತದ ಆರ್ಥಿಕತೆಯ ಪ್ರಗತಿಯ ಯಶೋಗಾಥೆಯಲ್ಲಿ ಜೀವಮಾನ ಕಾಲದ ಅವಕಾಶದ ಪ್ರಯೋಜನವನ್ನು ಪಡೆದುಕೊಳ್ಳುವುದು ಮುಖ್ಯ. ಸೂಕ್ಷ್ಮವಾಗಿ ಹೇಳಬೇಕು ಅಂದರೆ ನಮ್ಮ ಸುತ್ತ ಏನು ಸಂಭವಿಸುತ್ತಿದೆ ಎಂಬುದಕ್ಕಿಂತ ಮಿಗಿಲಾಗಿ ನಮಗೆ ಯಾವುದು ಮುಖ್ಯ ಎನ್ನುವುದರ ಮೇಲಷ್ಟೇ ಗಮನವಿಡಬೇಕು. ನಾವದನ್ನು ಜೀವನವಿಡೀ ನಿರಂತರವಾಗಿ ಮಾಡುತ್ತಿರುತ್ತೇವೆ. ಅನೇಕ ಬಾರಿ ನಮಗೆ ಬೇಸರ ತರುತ್ತಿದ್ದರೂ, ಹೆಚ್ಚು ಉತ್ತೇಜನವಿಲ್ಲದೇ ಇದ್ದರೂ ಸಂಯಮವನ್ನು ಕಾಯ್ದುಕೊಂಡಿದ್ದರೆ ಸುದೀರ್ಘಾವಧಿಯಲ್ಲಿ ಅನುಕೂಲವಾಗುವುದು ನಿಶ್ಚಿತ. ಇಂದು ಕೆಲವು ಶೇಕಡಾವಾರು ಅಂಶಗಳಲ್ಲಿ ಏರಿಳಿತವಾಗಿದ್ದರೂ ಕೂಡ ಒಂದು ದಶಕದ ಬಳಿಕ ಉತ್ತಮ ಫಲಿತಾಂಶವನ್ನೇ ನೀಡುತ್ತದೆ. ಈ ಕಾರಣದಿಂದ ನಮಗಾಗಿ ಮತ್ತು ನಮ್ಮ ಪ್ರೀತಿಯ ಕುಟುಂಬಕ್ಕಾಗಿ ನಮ್ಮ ಜೀವನದ ಗುರಿಗಳನ್ನು ಸಾಧಿಸಲು ಯೋಜಿಸುವುದು ಮತ್ತು ಸಾಧಿಸುವುದನ್ನು ಎಂದಿಗೂ ಕೈಬಿಡಬಾರದು. ಇದರಿಂದಲಷ್ಟೇ ಜೀವನದ ನಿಜವಾದ ನಿರ್ವಹಣೆಯನ್ನು ತೂಗಲಾಗುತ್ತದೆ.

# ಹೂಡಿಕೆಯ ಅಪಾಯಗಳು: ದಾಟುವ ದಾರಿ



**ನಿಮ್ಮ ಅಗತ್ಯಗಳು ಹಾಗೂ ರಿಸ್ಕ್ ಪ್ರೊಫೈಲ್‌ಗೆ ತಕ್ಕಂತೆ ಭಾರತದ ಮಾರುಕಟ್ಟೆಯನ್ನು ಅತ್ಯಂತ ವಿಶ್ವಾಸದಿಂದ ಎದುರಿಸಲು ಮತ್ತು ಸೂಕ್ತ ಹೂಡಿಕೆ ಪೋರ್ಟ್‌ಫೋಲಿಯೋ ಹೊಂದಲು ಅನುಕೂಲವಾಗುತ್ತದೆ.**

ಹೂಡಿಕೆಯ ಜಗತ್ತು ಯಾವತ್ತೂ ಭಿನ್ನ. ಅಲ್ಲಿ ನಾವು ಸಂಪತ್ತಿನ ಬೆನ್ನುಹತ್ತಿ ಹೋಗಲು ಯಾವಾಗ ಸಾಧ್ಯ ಎಂದರೆ ಅದರಲ್ಲಿರುವ ಅಪಾಯಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಿದಾಗ ಮಾತ್ರ. ಹೂಡಿಕೆದಾರರು ಸಂಕೀರ್ಣವಾದ ಸಂಪತ್ತಿನ ನಿರ್ವಹಣೆಯನ್ನು ದಾಟಿದಾಗ ಸಂಪತ್ತನ್ನು ಕೂಡಿಹಾಕಿದಷ್ಟೇ ಸಂಪತ್ತನ್ನು ಕಾಯ್ದುಕೊಳ್ಳುವುದು ಕೂಡ ಮುಖ್ಯ. ಪ್ರತಿಯೊಂದು ಹೂಡಿಕೆಯಲ್ಲಿಯೂ ಕೂಡ ಅಪಾಯ ಇದ್ದೇ ಇರುತ್ತದೆ. ಅದು ಹಣಕಾಸು ನಷ್ಟಕ್ಕೆ ಕಾರಣವಾಗಬಹುದು ಅಥವಾ ಹೂಡಿಕೆಯಿಂದ ನಿರೀಕ್ಷಿಸಿದಷ್ಟು ಆದಾಯ ಬಾರದೇ ಇರಬಹುದು. ನೀವು ಹೂಡಿಕೆಯನ್ನು ಆಯ್ಕೆ ಮಾಡಿಕೊಳ್ಳುತ್ತೀರೋ ಇಲ್ಲವೋ ಬೇರೆ ಮಾತು ಆದರೆ ನಿಮಗೆ ತಿಳಿದೋ ತಿಳಿಯದೆಯೋ ಅಪಾಯಕ್ಕೆ ಮುಖಾಮುಖಿಯಾಗುತ್ತೀರಿ. ಯಾವುದೇ ಹೂಡಿಕೆದಾರ ಇಂತಹ ರಿಸ್ಕ್‌ಗಳನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಇದರಿಂದ ರಿಸ್ಕ್‌ಗಳನ್ನು ತಪ್ಪಿಸಬಹುದು ಅಥವಾ ತಗ್ಗಿಸಬಹುದು ಹಾಗೂ ಅವುಗಳನ್ನು ನಿಭಾಯಿಸಲು ಕ್ರಮಗಳನ್ನು ಕೈಗೊಳ್ಳಬಹುದು.

## ಹೂಡಿಕೆಯ ರಿಸ್ಕ್‌ಗಳಲ್ಲಿ ಇರುವ ವಿಧಾನಗಳು:

1. **ಮಾರುಕಟ್ಟೆ ರಿಸ್ಕ್:** ಇದು ಒಟ್ಟಾರೆ ಮಾರುಕಟ್ಟೆ ಪರಿಸ್ಥಿತಿ ಹಾಗೂ ಆರ್ಥಿಕ ಅಂಶಗಳಿಂದ ಉಂಟಾಗುವ ರಿಸ್ಕ್. ಇದರಿಂದ ಹೂಡಿಕೆಯ ಮೌಲ್ಯ ಕಡಿಮೆಯಾಗಬಹುದು. ಇಂತಹ ರಿಸ್ಕ್ ಅನೇಕ ಸಂಗತಿಗಳ ಜೊತೆಗೆ ತಳಕು ಹಾಕಿಕೊಂಡಿದೆ. ಅವುಗಳಲ್ಲಿ ಸರ್ಕಾರದ ನೀತಿಗಳಲ್ಲಿ ಆಗಿರುವ ಬದಲಾವಣೆಗಳು, ರಾಜಕೀಯ ಅಸ್ಥಿರತೆ ಮತ್ತು ಹೂಡಿಕೆಗಳ ಮೇಲೆ ಪರಿಣಾಮ ಬೀರುವ ನಿಯಂತ್ರಣಗಳು ಸೇರಿವೆ. ಆಸ್ತಿ ವರ್ಗಗಳ ಮಟ್ಟದಲ್ಲಿ ಬಹುರೂಪಗಳನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಮತ್ತು ಇಂದಿನ ಪರಿಸ್ಥಿತಿಗೆ ತಕ್ಕಂತೆ ಸುದೀರ್ಘಾವಧಿ ಮಾರುಕಟ್ಟೆ ಭವಿಷ್ಯಗಳನ್ನು ಅರ್ಥ ಮಾಡಿಕೊಳ್ಳುವುದರಿಂದ ಈ ರಿಸ್ಕ್‌ಗಳನ್ನು ಸುಲಭವಾಗಿ ನಿಭಾಯಿಸಲು ಸಾಧ್ಯವಿದೆ.
2. **ಬಡ್ಡಿದರದ ರಿಸ್ಕ್:** ಬಡ್ಡಿದರಗಳಲ್ಲಿ ಆಗಿರುವ ಬದಲಾವಣೆಗಳಿಂದ ನಿಶ್ಚಿತ ಆದಾಯ ಅಥವಾ ಬಾಂಡ್‌ಗಳಂತಹ ಸಾಲದ ಹೂಡಿಕೆಗಳ ಮೌಲ್ಯದ ಮೇಲೆ ಪರಿಣಾಮ ಬೀರುವುದರಿಂದ ಉಂಟಾಗುವ ಅಪಾಯ. ಬಡ್ಡಿದರದಲ್ಲಿ ಏರಿಕೆಯಾಗುವುದರಿಂದ ಹೂಡಿಕೆಗಳ ಮುಕ್ತಾಯದ ಅವಧಿಯನ್ನು ಅವಲಂಬಿಸಿ ಸಾಲದ ಹೂಡಿಕೆಯ ಮೌಲ್ಯ ಕೂಡ ಕುಸಿಯುತ್ತದೆ ಮತ್ತು ಏರಿಕೆಯೂ ಆಗುತ್ತದೆ. ಹಾಗಾಗಿ ಈ ರಿಸ್ಕ್ ತಗ್ಗಿಸುವ ಸಲುವಾಗಿ ನಾನಾ ರೀತಿಯ ಮುಕ್ತಾಯದ ಅವಧಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಇದರ ಜೊತೆಗೆ ಬಡ್ಡಿದರದ ಆವರ್ತನಗಳನ್ನು ಅರ್ಥಮಾಡಿಕೊಳ್ಳುವುದರಿಂದಲೂ ರಿಸ್ಕ್‌ನ್ನು ಸೂಕ್ತವಾಗಿ ನಿಭಾಯಿಸಲು ಸಾಧ್ಯವಿದೆ.
3. **ಸಾಲದ ರಿಸ್ಕ್:** ಬಾಂಡ್‌ಗಳು ಮತ್ತು ಲೋನ್‌ಗಳಿಗೆ ಸಂಬಂಧಪಟ್ಟಂತೆ ಬಡ್ಡಿ ಪಾವತಿ ಅಥವಾ ಪ್ರಿನ್ಸಿಪಲ್ ಮೊತ್ತದ ಮರುಪಾವತಿ ಮೇಲಿನ ಸುಸ್ತಿಯಿಂದ ಸಾಲ ನೀಡುವವರು ಅಥವಾ ಪಡೆದವರಿಗೆ ಆಗುವ ರಿಸ್ಕ್. ಈ ಅಪಾಯವನ್ನು ಕಡಿಮೆ ಮಾಡಲು ನಾನಾ ಸಾಲ ನೀಡುವವರು ಮತ್ತು ಸಾಲದ ಶ್ರೇಯಾಂಕಗಳ ನಡುವೆ ವಿಭಜಿಸಬಹುದು ಮತ್ತು ಉನ್ನತ ಶ್ರೇಯಾಂಕದ ಷೇರುಗಳಲ್ಲಿ ಹೂಡಿಕೆಯ ಆಯ್ಕೆಗಳನ್ನು ಮಾಡಿಕೊಳ್ಳಬಹುದು.
4. **ಲಿಕ್ವಿಡಿಟಿ ರಿಸ್ಕ್:** ಅಪೇಕ್ಷಿತ ಬೆಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ಕಡಿಮೆ ಲಿಕ್ವಿಡ್ ಆಸ್ತಿಗಳಲ್ಲಿ ಸುಲಭವಾಗಿ ಟ್ರೇಡ್ ಮಾಡಲು ಸಾಧ್ಯವಾಗದ ಹೂಡಿಕೆಗಳಿಂದ ಉಂಟಾಗುವ ರಿಸ್ಕ್. ಆಗ ಬಹುರೂಪದ ಲಿಕ್ವಿಡ್ ಆಸ್ತಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಮತ್ತು ಅನಿರೀಕ್ಷಿತ ವೆಚ್ಚಗಳಿಗೆ ತುರ್ತು ನಿಧಿಯನ್ನು ಕಾಯ್ದಿಟ್ಟುಕೊಳ್ಳಬಹುದು. ಇದರಿಂದ ತರಾತುರಿಯಲ್ಲಿ

ಲಿಕ್ವಿಡ್ ಆಸ್ತಿಗಳನ್ನು ಮಾರಾಟಮಾಡಬೇಕಾದ ಅಗತ್ಯ ಬರುವುದಿಲ್ಲ.

5. **ಹಣದುಬ್ಬರದ ರಿಸ್ಕ್:** ಹಣದುಬ್ಬರದಲ್ಲಿ ಏರಿಕೆಯಾದಾಗ ಹೂಡಿಕೆಯ ಶಕ್ತಿ ಕುಂದುವುದರಿಂದ ಉಂಟಾಗುವ ರಿಸ್ಕ್. ಇಂತಹ ರಿಸ್ಕ್‌ಗಳಿಂದ ಪಾರಾಗಲು ಇರುವ ದಾರಿ ಏನೆಂದರೆ ತೆರಿಗೆ ನಂತರದ ಗಳಿಕೆಯನ್ನು ನೀಡುವ ಆಸ್ತಿ ವರ್ಗಗಳಲ್ಲಿ ಹೂಡಿಕೆ ಮಾಡುವುದು. ನೀವು ಕೇವಲ ಡೆಟ್ ಹೂಡಿಕೆದಾರರಾಗಿದ್ದರೆ ಇತರ ಆಸ್ತಿ ವರ್ಗಗಳಲ್ಲಿ ಹೂಡಿಕೆಯನ್ನು ವಿಭಜನೆ ಮಾಡಬಹುದು. ಅದರಲ್ಲಿಯೂ ಮುಖ್ಯವಾಗಿ ಈಕ್ವಿಟಿಗಳಲ್ಲಿ ಹೂಡಿಕೆ ಮಾಡಬಹುದು. ಇದರಿಂದ ಸುದೀರ್ಘಾವಧಿಯಲ್ಲಿ ಉತ್ತಮ ಆದಾಯ ಗಳಿಕೆಯ ಸಾಧ್ಯತೆಯಿರುತ್ತದೆ.

6. **ನಿರ್ದಿಷ್ಟ/ಅವೈಜ್ಞಾನಿಕ ರಿಸ್ಕ್‌ಗಳು:** ಕೆಲವು ನಿರ್ದಿಷ್ಟವಾದ ಕಂಪನಿಗಳಲ್ಲಿ, ವಲಯಗಳಲ್ಲಿ ಅಥವಾ ನಿರ್ದಿಷ್ಟ ಸಮೂಹದ ಕಂಪನಿಗಳಲ್ಲಿ ಹೂಡಿಕೆ ಮಾಡುವುದರಿಂದ ಉಂಟಾಗುವ ರಿಸ್ಕ್. ಇದರಲ್ಲಿ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳು, ಪೈಪೋಟಿ, ಸರಬರಾಜು ಜಾಲದಲ್ಲಿನ ವ್ಯತ್ಯಾಸ, ತಂತ್ರಜ್ಞಾನಕ್ಕೆ ಸಂಬಂಧಿಸಿದ ತೊಂದರೆಗಳು ತಳಕು ಹಾಕಿಕೊಂಡಿರಬಹುದು. ಬಹುರೂಪದ ಹೂಡಿಕೆಗಳನ್ನು ಮಾಡುವುದರಿಂದ ಇಂತಹ ರಿಸ್ಕ್‌ನ್ನು ಸುಲಭವಾಗಿ ತಡೆಯಬಹುದು.

7. **ಘಟನೆಗಳಿಂದಾಗುವ ರಿಸ್ಕ್:** ಅನಿರೀಕ್ಷಿತ ಘಟನೆಗಳು ಹೂಡಿಕೆಗಳ ಮೇಲೆ ಪರಿಣಾಮ ಬೀರಬಹುದು. ಇದಕ್ಕೆ ಸಂಬಂಧಿಸಿದ ರಿಸ್ಕ್‌ಗಳಿವು. ಇಂತಹ ಘಟನೆಗಳಲ್ಲಿ ನೈಸರ್ಗಿಕ ವಿಕೋಪಗಳು, ಯುದ್ಧ ಅಥವಾ ದೊಡ್ಡ ಮಟ್ಟದಲ್ಲಿ ಕಾಣಿಸಿಕೊಳ್ಳುವ ಸಾಂಕ್ರಾಮಿಕ ರೋಗಗಳು, ಮತ್ತು ಸಣ್ಣ ಮಟ್ಟದಲ್ಲಿ ಸಂಭವಿಸುವ ಆರೋಗ್ಯ ಮತ್ತು ಆಸ್ತಿಗೆ ಉಂಟಾಗುವ ನಷ್ಟಗಳು ಸೇರಿವೆ. ಇತ್ತೀಚಿನ ವರ್ಷಗಳಲ್ಲಿ ನಾವು ಇಂತಹ ರಿಸ್ಕ್‌ಗಳು ಜಾಗತಿಕ ಮಟ್ಟದಲ್ಲಿ ಸಂಭವಿಸಿದ್ದನ್ನು ಕಂಡಿದ್ದೇವೆ ಮತ್ತು ಇವುಗಳಲ್ಲಿ ಕೆಲವು ರಾಷ್ಟ್ರಗಳಿಗೆ ಸೀಮಿತವಾದ ರಿಸ್ಕ್‌ಗಳು ಕೂಡ ಇದ್ದವು. ಇಂತಹ ರಿಸ್ಕ್‌ಗಳ ಸಂದರ್ಭದಲ್ಲಿಯೂ ಕೂಡ ಬಹುರೂಪದ ಹೂಡಿಕೆಗಳನ್ನು ಮಾಡುವುದು, ಜಾಗತಿಕ ವಿದ್ಯಮಾನಗಳ ಬಗ್ಗೆ ತಿಳಿದುಕೊಂಡಿರುವುದು ಮತ್ತು ವೈಯಕ್ತಿಕ ಮಟ್ಟದಲ್ಲಿ ಯಾವುದೇ ರಿಸ್ಕ್‌ಗಳನ್ನು ಎದುರಿಸಲು ವಿಮೆಯ ರಕ್ಷಣೆಯನ್ನು ಪಡೆದುಕೊಳ್ಳುವುದನ್ನು ಪರಿಗಣಿಸಬಹುದು.

8. **ದೀರ್ಘಾಯುಷ್ಯದ ರಿಸ್ಕ್:** ಒಬ್ಬ ಮನುಷ್ಯ ಎಷ್ಟು ಸುದೀರ್ಘಾವಧಿ ಜೀವಿಸುತ್ತಾನೆ ಎಂಬುದು ತಿಳಿಯದೇ ಇರುವುದರಿಂದ ಈ ರಿಸ್ಕ್ ಇರುತ್ತದೆ. ನೀವು ಮಾಡಿದ ಹೂಡಿಕೆಗಳು ನಿಮ್ಮ ಜೀವನ ಪರ್ಯಂತ ಇರುತ್ತದೆ ಎಂಬ ಖಾತರಿ ಇರುವುದಿಲ್ಲ. ಅದರಲ್ಲೂ ವಿಶೇಷವಾಗಿ ನಿವೃತ್ತಿಯ ಬಗ್ಗೆ ಯೋಚನೆ ಬಂದಾಗ. ಇಂತಹ ರಿಸ್ಕ್‌ಗಳನ್ನು ನಿಭಾಯಿಸುವ ದಾರಿ ಎಂದರೆ ನಿರಂತರವಾಗಿ ಬೆಳೆಯುವ ಮತ್ತು ಜೀವನಪರ್ಯಂತ ನಗದಿನ ಹರಿವಿಗೆ ಅವಕಾಶ ನೀಡುವ ಆಸ್ತಿಯನ್ನು ಸೃಷ್ಟಿಸುವುದು. ಅದರ ಜೊತೆಗೇ ಅಧಿಕ ಕವರೇಜ್ ಸೌಲಭ್ಯವನ್ನು ಹೊಂದಿರುವ ಆರೋಗ್ಯ ವಿಮೆ ಮಾಡಿಸುವುದು.

9. **ನಡವಳಿಕೆಯ ರಿಸ್ಕ್:** ನಿಮ್ಮ ಹೂಡಿಕೆ ನಿರ್ಧಾರಗಳ ಮೇಲೆ ಪ್ರಭಾವ ಬೀರುವಂತಹ ಭಾವನಾತ್ಮಕ ಅಂಶಗಳನ್ನು ಒಳಗೊಂಡಿರುವ ನಡವಳಿಕೆಯ ರಿಸ್ಕ್‌ಗಳು. ಕೆಲವೊಮ್ಮೆ ನಾವು ಪೂರ್ವಗ್ರಹಕ್ಕೆ ಒಳಗಾಗಿ ಮತ್ತು ಭಾವನೆಗಳ ಒತ್ತಡಕ್ಕೆ ಸಿಕ್ಕು ಹಣಕಾಸು ನಿರ್ಧಾರಗಳನ್ನು ಕೈಗೊಳ್ಳಬಹುದು. ಇವನ್ನು ನಾವು ಅರ್ಥ ಮಾಡಿಕೊಳ್ಳದೇ ಇದ್ದರೆ ಸುದೀರ್ಘಾವಧಿಯಲ್ಲಿ ನಮ್ಮ ಸಂಪತ್ತಿನ ಮೇಲೆ ಅಸಮಂಜಸವಾದ ರೀತಿಯಲ್ಲಿ ಪರಿಣಾಮವನ್ನು ಬೀರಬಹುದು.

## ಈ ರಿಸ್ಕ್‌ಗಳನ್ನು ತಪ್ಪಿಸುವುದು, ನಿಭಾಯಿಸುವುದು ಹೇಗೆ?

1. **ಬಹುರೂಪದ ಹೂಡಿಕೆಗಳು:** ಹೂಡಿಕೆಗಳನ್ನು ಬೇರೆ ಬೇರೆ ಸ್ಥರಗಳಲ್ಲಿ ವಿಭಜಿಸುವುದರಿಂದ ಮಾರುಕಟ್ಟೆಯ ಮೇಲೆ ಆಗುವ ಪರಿಣಾಮವನ್ನು ತಗ್ಗಿಸಬಹುದು. ನಿರ್ದಿಷ್ಟ ಆಸ್ತಿ ವರ್ಗಗಳಿಗೆ, ಕಂಪನಿಗಳಿಗೆ, ಮಾರುಕಟ್ಟೆ ಬಂಡವಾಳೀಕರಣಕ್ಕೆ ಸೀಮಿತವಾಗಿ ಹೂಡಿಕೆಗಳನ್ನು ಮಾಡಿದರೆ ಇಂತಹ ರಿಸ್ಕ್‌ಗಳನ್ನು ಎದುರಿಸಬೇಕಾಗುತ್ತದೆ. ಹಾಗಾಗಿ ಆಸ್ತಿಗಳ ಹಂಚಿಕೆಯಲ್ಲಿ ಸೂಕ್ತವಾದ ರೀತಿಯಲ್ಲಿ ವಿಭಜನೆಯನ್ನು ಮಾಡುವುದು ಇದಕ್ಕೆ ಮೊದಲ ಪರಿಹಾರ. ಜೊತೆಗೆ ಆಸ್ತಿ ವರ್ಗದಲ್ಲಿಯೇ ವಿಭಜನೆಯನ್ನು ಮಾಡುವುದರಿಂದ ಇನ್ನಷ್ಟು ರಿಸ್ಕ್ ತಪ್ಪಿಸಬಹುದು.

2. **ಸಂಶೋಧನೆ ಮತ್ತು ಮಾಹಿತಿ:** ಹೂಡಿಕೆದಾರರಾಗಿ ನಮಗೆ ಆರ್ಥಿಕ ವಿದ್ಯಮಾನಗಳ ಬಗೆಗೆ ಮತ್ತು ಈಕ್ವಿಟಿ ಹಾಗೂ ಡೆಟ್ ಮಾರುಕಟ್ಟೆಗಳ ಬಗ್ಗೆ ತಕ್ಕಮಟ್ಟಿನ ಮಾಹಿತಿಯಾದರೂ ಇರಬೇಕು. ಇಂತಹ ಮಾಹಿತಿಗಳನ್ನು ಪಡೆದಿರುವುದರಿಂದ ನಮ್ಮ ಆಸ್ತಿ ಹಂಚಿಕೆಗಳನ್ನು ಮತ್ತು ಮಾರುಕಟ್ಟೆ ರಿಸ್ಕ್‌ಗಳು, ವ್ಯವಸ್ಥಿತ ರಿಸ್ಕ್‌ಗಳು ಮತ್ತು ಬಡ್ಡಿದರಕ್ಕೆ ಸಂಬಂಧಿಸಿದ ರಿಸ್ಕ್‌ಗಳನ್ನು ಅರ್ಥ ಮಾಡಿಕೊಂಡು ನಿಭಾಯಿಸಲು ಸಾಧ್ಯವಾಗುತ್ತದೆ.




3. **ಸುದೀರ್ಘಾವಧಿಯ ದೃಷ್ಟಿಕೋನ:** ಸುದೀರ್ಘಾವಧಿಯಲ್ಲಿಯೂ ಮಾರುಕಟ್ಟೆಯಲ್ಲಿ ಏರಿಳಿತಗಳು ಅಥವಾ ಪಲ್ಲಟಗಳು ಉಂಟಾಗುತ್ತವೆ ಎಂಬುದಕ್ಕೆ ಸಾಕಷ್ಟು ಪುರಾವೆಗಳು ನಮಗೆ ಸಿಗುತ್ತವೆ. ಹಾಗಾಗಿ ಧನಾತ್ಮಕವಾದ ಆದಾಯಗಳು ಬರುವ ತನಕ ದೀರ್ಘಾವಧಿ ಹೂಡಿಕೆಗಳನ್ನು ಮಾಡುತ್ತಲೇ ಇರಬೇಕು. ಇದಕ್ಕಾಗಿಯೇ ನಾವು ಯಾವತ್ತೂ ಹೇಳುವ ಮಾತು ಏನೆಂದರೆ ಈಕ್ವಿಟಿಗಳಲ್ಲಿ ಸುದೀರ್ಘಾವಧಿ ಹೂಡಿಕೆಗಳನ್ನು ಚಾಲ್ತಿಯಲ್ಲಿಡಬೇಕು ಎಂದು. ಈ ಅವಧಿಯಲ್ಲಿ ಸಾಕಷ್ಟು ಮಾರುಕಟ್ಟೆ ರಿಸ್ಕ್‌ಗಳು ಮತ್ತು ವ್ಯವಸ್ಥಿತ ರಿಸ್ಕ್‌ಗಳು ತಗ್ಗುತ್ತವೆ ಅಥವಾ ಇತ್ಯರ್ಥವಾಗಿರುತ್ತವೆ.

4. **ತಜ್ಞರ ಮಾರ್ಗದರ್ಶನ:** ರಿಸ್ಕ್‌ಗಳನ್ನು ನಿಭಾಯಿಸುವ ವಿಚಾರದಲ್ಲಿ ತಜ್ಞರ ಮಾರ್ಗದರ್ಶನ ಮತ್ತು ಸಲಹೆಗಳು ಹೆಚ್ಚು ಉಪಯುಕ್ತ. ಆರಂಭಿಕ ವರ್ಷಗಳಲ್ಲಿ ಕಲಿತ ಅನುಭವಗಳು, ಸಿಕ್ಕ ಅವಕಾಶಗಳು ನಿಮ್ಮನ್ನು ಅನೇಕ ವರ್ಷಗಳ ಕಾಲ ಕಾಪಾಡಲಿವೆ ಎಂಬುದು ಸತ್ಯ. ಜೊತೆಗೆ ತಜ್ಞರ ಮಾರ್ಗದರ್ಶನದಿಂದ ಭಾವನಾತ್ಮಕವಾಗಿ ಮಾಡುವ ಮತ್ತು ನಮ್ಮ ನಡವಳಿಕೆಯಿಂದ ಆಗುವ ತಪ್ಪುಗಳನ್ನು ತಗ್ಗಿಸಬಹುದು. ಇದರಿಂದ ನಮ್ಮ ಹೂಡಿಕೆಯ ವಿಧಾನ ಬದಲಾಗುತ್ತದೆ. ಇದರಿಂದ ನಮ್ಮ ಸುದೀರ್ಘಾವಧಿ ಹಣಕಾಸು ಆರೋಗ್ಯದ ಮೇಲೆ ಧನಾತ್ಮಕವಾದ ಪರಿಣಾಮವನ್ನು ಬೀರುತ್ತದೆ.

**ಕೊನೆಯ ಮಾತು:** ಭಾರತದ ಚಲನಶೀಲವಾದ ಹೂಡಿಕೆಯ ವಾತಾವರಣದಲ್ಲಿ ಪರಿಣಾಮಕಾರಿ ರಿಸ್ಕ್ ನಿರ್ವಹಣೆ ಕೇವಲ ಆಯ್ಕೆಯಲ್ಲ ಅದು ಅತ್ಯಗತ್ಯ. ರಿಸ್ಕ್‌ಗಳನ್ನು ನಿಭಾಯಿಸುವ ಸಮಗ್ರ ವಿಧಾನದಲ್ಲಿ ಬಹುರೂಪದ ಪೋರ್ಟ್‌ಫೋಲಿಯೋಗಳನ್ನು ಹೊಂದುವುದು, ಸಾಕಷ್ಟು ಪ್ರಮಾಣದ ವಿಮೆ ಮತ್ತು ಹೂಡಿಕೆ ನಡವಳಿಕೆಗಳನ್ನು ನಿಭಾಯಿಸುವುದು ಬಹುಮುಖ್ಯ ಅಂಶಗಳಾಗಿವೆ. ಇಂತಹ ಸಂದರ್ಭದಲ್ಲಿ ಮ್ಯುಚ್ಯುಯಲ್ ಫಂಡ್ ವಿತರಕರಂತಹ ತಜ್ಞರು ಮತ್ತು ವೃತ್ತಿಪರರ ಮಾರ್ಗದರ್ಶನ ಲಭ್ಯವಾದರೆ ನಿಮಗೆ ಬೇಕಾದ ರೀತಿಯಲ್ಲಿ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ನಿಮ್ಮ ಅಗತ್ಯಗಳು ಹಾಗೂ ರಿಸ್ಕ್ ಪ್ರೊಫೈಲ್‌ಗೆ ತಕ್ಕಂತೆ ಭಾರತದ ಮಾರುಕಟ್ಟೆಯನ್ನು ಅತ್ಯಂತ ವಿಶ್ವಾಸದಿಂದ ಎದುರಿಸಲು ಮತ್ತು ಸೂಕ್ತ ಹೂಡಿಕೆ ಪೋರ್ಟ್‌ಫೋಲಿಯೋ ಹೊಂದಲು ಅನುಕೂಲವಾಗುತ್ತದೆ. ಖುಷಿಯ ಹೂಡಿಕೆ ನಿಮ್ಮದಾಗಲಿ! ■

**ವಾಸ್ತವಾಂಶಗಳನ್ನು ಬಹಿರಂಗ ಪಡಿಸುವಲ್ಲಿ ವಿಫಲವಾದರೆ ಅಗತ್ಯದ ಸಮಯದಲ್ಲಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.**



# ವಿಮೆಯಲ್ಲಿ DISCLOSURE ಮಹತ್ವ

ಹಣಕಾಸು ಭದ್ರತೆಯಲ್ಲಿ ನಮಗೆ ಮೂಲಾಧಾರವಾಗಿ ಕಾಣುವುದು ವಿಮಾ ಪಾಲಿಸಿ. ಬದುಕು ತಂದೊಡ್ಡುವ ಅನಿಶ್ಚಿತತೆಗಳ ಸಂದರ್ಭದಲ್ಲಿ ಅದು ಭದ್ರತೆಯನ್ನು ಒದಗಿಸುತ್ತದೆ. ಹಾಗಾಗಿ ವಿಮೆ ಯಾವತ್ತೂ ಪಾರದರ್ಶಕತೆ, ಉತ್ತಮ ನಂಬಿಕೆ ಮತ್ತು ಕರಾರುವಕ್ಕಾದ ಮಾಹಿತಿಯ ವಿನಿಮಯದ ಸಿದ್ಧಾಂತಗಳ ಮೇಲೆ ನಿಂತಿದೆ. ಒಂದು ವಿಮಾ ಪಾಲಿಸಿಯನ್ನು ಖರೀದಿ ಮಾಡುವ ಸಂದರ್ಭದಲ್ಲಿ ವ್ಯಕ್ತಿಯು ತನಗೆ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ವಿಮಾದಾರರಿಗೆ ಬಹಿರಂಗಪಡಿಸಬೇಕಾಗುತ್ತದೆ. ಇಂತಹ ಕ್ರಮವನ್ನೇ ನಾವು ವಾಸ್ತವಾಂಶಗಳ ಬಹಿರಂಗಪಡಿಸುವಿಕೆ (disclosure of material facts) ಎಂದು ಕರೆಯುತ್ತೇವೆ. ಇದು ಪ್ರಾಮಾಣಿಕ ಹಾಗೂ ನ್ಯಾಯಸಮ್ಮತ ಒಪ್ಪಂದದ ಅಡಿಪಾಯ.

ಆದರೆ ಯಾವುದೇ ಒಂದು ಒಪ್ಪಂದದಲ್ಲಿ ಮಾಡಿಕೊಂಡಂತೆ ಇಲ್ಲಿಯೂ ಕೂಡ ಸಂಬಂಧಿಸಿದ ಮಾಹಿತಿಯನ್ನು ಅಥವಾ ವಾಸ್ತವಾಂಶಗಳನ್ನು ಬಹಿರಂಗಪಡಿಸದೇ ಇರುವುದರಿಂದ ಪಾಲಿಸಿದಾರ ಮತ್ತು ವಿಮಾದಾರ ಇಬ್ಬರ ಮೇಲೂ ಗಂಭೀರ ಪರಿಣಾಮ ಬೀರಬಹುದು. ಇದು ನಂಬಿಕೆಯ ಅಡಿಪಾಯವನ್ನೇ ಅಲುಗಾಡಿಸಿಬಿಡಬಹುದು. ವ್ಯಕ್ತಿ ವಿಮಾ ಪಾಲಿಸಿಗೆ ಸಂಬಂಧಪಟ್ಟಂತೆ ವಾಸ್ತವಾಂಶಗಳನ್ನು ಬಹಿರಂಗಪಡಿಸುವುದು ಎಷ್ಟು ಮುಖ್ಯ ಮತ್ತು ಅದರಲ್ಲಿ ವಿಫಲವಾದರೆ ಎದುರಿಸಬೇಕಾದ ಸಂಭಾವ್ಯ ಪರಿಣಾಮಗಳೇನು ಎಂಬುದನ್ನು ಈ ಲೇಖನದಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ:

ವಾಸ್ತವಾಂಶಗಳು ಅಂದರೇನು: ಎಲ್ಲ ವಿಮಾ ಒಪ್ಪಂದಗಳು 'ಅತ್ಯಧಿಕ ನಂಬಿಕೆ'ಯ ಸಿದ್ಧಾಂತದ ಮೇಲೆ ನಡೆಯುತ್ತವೆ. ಅಂದರೆ ವಿಮಾ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವ ವ್ಯಕ್ತಿ ವಿಮಾ ಸಂಸ್ಥೆಗೆ ಅಗತ್ಯವಿರುವ ಎಲ್ಲ ವಾಸ್ತವ ಸಂಗತಿಗಳನ್ನು ಬಹಿರಂಗಪಡಿಸಬೇಕು. ವಾಸ್ತವ ಸಂಗತಿ ಅಥವಾ ವಸ್ತುನಿಷ್ಠ ಮಾಹಿತಿ ಎಂದರೆ, ವ್ಯಕ್ತಿಯ ರಿಸ್ಕ್ ಪ್ರೊಫೈಲ್‌ನ್ನು ಪಡೆದ ಖಾತರಿದಾರನು ಆ ರಿಸ್ಕ್‌ನ್ನು ಒಪ್ಪಿಕೊಳ್ಳಲು ನಿರ್ಧರಿಸಿ ವಿಮಾ ಪಾಲಿಸಿಯನ್ನು ನೀಡುವ ಅಥವಾ ನಿರಾಕರಿಸುವ ಅಥವಾ ಸೌಲಭ್ಯದ ನಿಯಮ ಮತ್ತು ಷರತ್ತುಗಳನ್ನು ತೀರ್ಮಾನಿಸಲು ಹಾಗೂ ಸೂಕ್ತವಾದ ಪ್ರೀಮಿಯಂನ್ನು ನಿರ್ಧರಿಸಲು ಆಧಾರವಾದ ಎಲ್ಲ ಮಾಹಿತಿಗಳನ್ನು ವಸ್ತುನಿಷ್ಠ ಮಾಹಿತಿ ಎನ್ನುತ್ತಾರೆ.

ಈ ವಾಸ್ತವಾಂಶಗಳಿಗೆ ಉದಾಹರಣೆಗಳೆಂದರೆ ಒಬ್ಬ ವ್ಯಕ್ತಿಯ ವಿವರಗಳಾದ ವಯಸ್ಸು, ವೈಯಕ್ತಿಕ ಮತ್ತು ಕುಟುಂಬದ ವೈದ್ಯಕೀಯ ಹಿನ್ನೆಲೆ, ಉದ್ಯೋಗ, ಹವ್ಯಾಸಗಳು, ಕ್ರಿಮಿನಲ್ ಹಿನ್ನೆಲೆ ಇತ್ಯಾದಿಗಳು ಸೇರಿರುತ್ತವೆ. ಜೊತೆಗೆ ಇತರ ಮಾಹಿತಿಗಳಾದ ಆದಾಯ, ಹಿಂದಿನ ಕ್ಲೈಮ್‌ಗಳು, ಇತರ ವಿಮಾದಾರರ ಪಾಲಿಸಿಗಳು ಮತ್ತು ವಿಮಾ ಪಾಲಿಸಿಯ ಸ್ವರೂಪಕ್ಕೆ ತಕ್ಕಂತೆ ಇತರ ಅಂಶಗಳು.

ರಿಸ್ಕ್‌ನ್ನು ಪರಿಣಾಮಕಾರಿಯಾಗಿ ಮೌಲ್ಯಮಾಪನ ಮಾಡಲು ಒಪ್ಪಂದದ ಸಂದರ್ಭದಲ್ಲಿ ವಿಮಾದಾರರು ಪಾಲಿಸಿದಾರರು ನೀಡಿದ ಮಾಹಿತಿಯ ವಸ್ತುನಿಷ್ಠತೆಯನ್ನು ಹೆಚ್ಚು ಅವಲಂಬಿಸಿರುತ್ತಾರೆ. ಅರ್ಜಿಯನ್ನು ಪರಿಷ್ಕರಣೆ ಮಾಡುವ ಹಂತದಲ್ಲಿಯೇ ಸಂಪೂರ್ಣ ಹಾಗೂ ಕರಾರುವಕ್ಕಾದ ಮಾಹಿತಿಯನ್ನು ವಿಮಾದಾರರಿಗೆ ನೀಡುವುದು ಪಾಲಿಸಿದಾರರ ಕಾನೂನಾತ್ಮಕ ಹಾಗೂ ನೈತಿಕ ಕರ್ತವ್ಯವಾಗಿದೆ. ಇದನ್ನು ಐಆರ್‌ಡಿಎಐ ಮಾರ್ಗಸೂಚಿಗಳಂತೆ ರೂಪಿಸಲಾಗಿದ್ದು ಜೀವವಿಮೆ, ಆರೋಗ್ಯ ಅಥವಾ ಸಾಮಾನ್ಯ ವಿಮೆಯಂತಹ ಎಲ್ಲ ವಿಮೆಗಳಿಗೂ ಇದು ಅನ್ವಯವಾಗುತ್ತದೆ.

## ಬಹಿರಂಗ ಮಾಡದೇ ಇದ್ದರೆ ಪರಿಣಾಮಗಳು:

ಯಾವುದೇ ವಾಸ್ತವಾಂಶಗಳನ್ನು ಬಹಿರಂಗಪಡಿಸದೇ ಇದ್ದ ಸಂದರ್ಭದಲ್ಲಿ ಅಂತಹ ಪಾಲಿಸಿಯನ್ನು ಆರಂಭದಿಂದಲೇ ಅಸಿಂಧು ಎಂದು ಪರಿಗಣಿಸಲಾಗುತ್ತದೆ ಮತ್ತು ವಿಮಾದಾರರು ಯಾವುದೇ ಕ್ಲೈಮ್‌ಗಳನ್ನು ನೀಡುವುದಿಲ್ಲ ಅಥವಾ ಯಾವುದೇ ಪ್ರೀಮಿಯಂಗಳನ್ನು ಹಿಂದಿರುಗಿಸುವುದಿಲ್ಲ. ಇದರಿಂದ ಪಾಲಿಸಿದಾರರಿಗೆ ಯಾವುದೇ ವಿಮಾ ರಕ್ಷಣೆ ಸಿಗುವುದಿಲ್ಲ. ವಾಸ್ತವ ಸಂಗತಿಗಳನ್ನು ಬಹಿರಂಗಪಡಿಸದೇ ಇದ್ದರೆ ಕ್ಲೈಮ್‌ಗಳನ್ನು ನಿರಾಕರಿಸಲಾಗುತ್ತದೆ ಮತ್ತು ಇದರಿಂದ ಪಾಲಿಸಿದಾರರು ಹಣಕಾಸಿನ ಸಂಪೂರ್ಣ ಹೊರೆಯನ್ನು ಭರಿಸಬೇಕಾಗುತ್ತದೆ. ಇದರ ಜೊತೆಗೆ ಭವಿಷ್ಯದಲ್ಲಿಯೂ ವಿಮಾ ಪಾಲಿಸಿಯನ್ನು ಪಡೆಯುವ ಪಾಲಿಸಿದಾರನ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ. ಯಾಕೆಂದರೆ ವಿಮಾದಾರರು ಈ ಹಿಂದಿನ ಮಾಹಿತಿಯನ್ನು ಹಂಚಿಕೊಂಡಿರುವುದರಿಂದ ವಿಮಾ ಪಾಲಿಸಿಯನ್ನು ನಿಜಕ್ಕೂ ಪಡೆಯಬೇಕಾದರೆ ಅತ್ಯಧಿಕ ಪ್ರೀಮಿಯಂ ಭರಿಸಬೇಕಾಗಬಹುದು. ಈ ಎಲ್ಲ ಕಾರಣಗಳಿಂದ ವಿಮಾ ಪ್ರಸ್ತಾವದ ಅರ್ಜಿಯಲ್ಲಿ ಕರಾರುವಕ್ಕಾದ ಮತ್ತು ಸಂಪೂರ್ಣ ಮಾಹಿತಿಯನ್ನು ಹಂಚಿಕೊಳ್ಳುವುದು ಬಹಳ ಮುಖ್ಯ.

## ವಾಸ್ತವಾಂಶ ಬಹಿರಂಗ ಪಡಿಸದೇ ಇರುವುದರ ಹಿಂದಿರುವ ಕಾರಣಗಳನ್ನು ಅರ್ಥ ಮಾಡಿಕೊಳ್ಳುವುದು:

ಭಾರತದಲ್ಲಿ ವಿಮಾ ಪಾಲಿಸಿಗಾಗಿ ಕೆಲವು ವಾಸ್ತವಾಂಶಗಳನ್ನು ಬಹಿರಂಗಪಡಿಸದೇ ಇರುವುದಕ್ಕೆ ಅನೇಕ ರೀತಿಯ ಕಾರಣಗಳಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಮಾಡಲಾಗಿದೆ.

1. **ಅರಿವಿನ ಕೊರತೆ/ತಪ್ಪು ತಿಳುವಳಿಕೆ:** ಅರಿವಿನ ಕೊರತೆಯಿಂದಾಗಿ ಅಥವಾ ತಪ್ಪು ತಿಳುವಳಿಕೆಯ ಕಾರಣದಿಂದಾಗಿ ಅನೇಕ ಮಂದಿ ಪಾಲಿಸಿದಾರರಿಗೆ ನಿಜಕ್ಕೂ ವಾಸ್ತವಾಂಶಗಳು ಅಂದರೆ ಏನು ಎಂಬುದು ಸಂಪೂರ್ಣವಾಗಿ ತಿಳಿದುಕೊಂಡಿರುವುದಿಲ್ಲ. ಹಾಗಾಗಿ ಉದ್ದೇಶಪೂರ್ವಕವಲ್ಲದೆ ಮತ್ತು ತಿಳಿಯದೇ ಅವರು ಕೆಲವು ಮಾಹಿತಿಗಳನ್ನು ಪ್ರಸ್ತಾವನೆಯ ಅರ್ಜಿ ನಮೂನೆಯಲ್ಲಿ ಬಹಿರಂಗ ಮಾಡದೇ ಇರುವ ಸಾಧ್ಯತೆ ಇರುತ್ತದೆ. ಕೆಲವರಿಗೆ ಭಾಷೆ ಅಥವಾ ಅಕ್ಷರಾಭ್ಯಾಸದ ಕೊರತೆಯಿಂದ ಅರ್ಜಿ ನಮೂನೆಯನ್ನು ಅರ್ಥಮಾಡಿಕೊಳ್ಳಲು ಅಥವಾ ಕರಾರುವಕ್ಕಾಗಿ ಭರ್ತಿ ಮಾಡಲು ಕಷ್ಟವಾಗಿರಬಹುದು. ಜೊತೆಗೆ ಕೆಲವು ಮಾಹಿತಿಗಳು ಅಪ್ರಸ್ತುತ ಹಾಗೂ ಪ್ರಸ್ತಾಪ ಮಾಡಬೇಕಾದ ಅಗತ್ಯವಿಲ್ಲ ಎಂದು ಭಾವಿಸಿರಬಹುದು.

2. **ಅರ್ಜಿಯನ್ನು ತಕ್ಷಣ ಭರ್ತಿ ಮಾಡುವ ಉದ್ದೇಶ:** ಈ ಅರ್ಜಿಯನ್ನು ಭರ್ತಿ ಮಾಡುವುದು ಹಾಗೂ ವಾಸ್ತವಾಂಶ ಬಹಿರಂಗಪಡಿಸುವುದು ಕಷ್ಟದ ಮತ್ತು ಸಮಯ ತಿನ್ನುವ ಕೆಲಸ ಎಂದು ಕೆಲವರು ಭಾವಿಸಿರುತ್ತಾರೆ. ಅವರು ಇಡೀ ಪ್ರಕ್ರಿಯೆಯ ಬಗ್ಗೆ ಅಸಡ್ಡೆ ವಹಿಸುವ ಸಾಧ್ಯತೆ ಇರುತ್ತದೆ ಮತ್ತು ಸುದೀರ್ಘವಾದ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಸಂಪೂರ್ಣ ಹಾಗೂ ಕರಾರುವಕ್ಕಾದ ಮಾಹಿತಿಯನ್ನು ನೀಡಲು ಹಿಂಜರಿಯಬಹುದು. ವಿಮೆಯನ್ನು ಪಡೆಯುವ ಬಗ್ಗೆ ಕಾತುರರಾಗಿರುವ ಪಾಲಿಸಿದಾರರು ಅರ್ಜಿ ಭರ್ತಿ ಮಾಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸಬಹುದು ಮತ್ತು ಕೆಲವು ನಿರ್ಣಾಯಕ ಮಾಹಿತಿಗಳನ್ನು ಕೈಬಿಡಬಹುದು. ಅವರ ಪ್ರಕಾರ ಅವು ಮುಖ್ಯವಾದ ಅಂಶ ಅಲ್ಲವಿರಬಹುದು.

3. **ಉದ್ದೇಶಪೂರ್ವಕ ತಪ್ಪು:** ಕೆಲವು ಪ್ರಕರಣಗಳಲ್ಲಿ ಪಾಲಿಸಿದಾರರು ಸಂಬಂಧಪಟ್ಟ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಕೈಬಿಡಬಹುದು. ಸುಳ್ಳು ಮಾಹಿತಿಗಳ ಮೂಲಕ ಕವರೇಜ್ ಪಡೆಯುವ ಅಥವಾ ಪ್ರೀಮಿಯಂ ಮೊತ್ತದಲ್ಲಿ ಕಡಿತ ಮಾಡುವ ಉದ್ದೇಶದಿಂದ ಈ ರೀತಿ ಮಾಡಿರುವ ಸಾಧ್ಯತೆ ಇರುತ್ತದೆ. ಇನ್ನು ಕೆಲವು ಬಾರಿ ಬ್ರೋಕರ್‌ಗಳು ಅಥವಾ ವಿಮಾ ಏಜೆಂಟ್‌ಗಳು ಸಾಧ್ಯವಾದಷ್ಟು ಬೇಗ ಒಪ್ಪಂದವನ್ನು ಮುಕ್ತಾಯ ಮಾಡುವ ಅಥವಾ ಅನುಮೋದನೆ ಪಡೆಯುವ ದೃಷ್ಟಿಯಿಂದ ಕೆಲವು ಮಾಹಿತಿಗಳನ್ನು ಬಿಟ್ಟುಬಿಡುವಂತೆಯೂ ಪಾಲಿಸಿದಾರರಿಗೆ ಉತ್ತೇಜನ ನೀಡಬಹುದು.

4. **ಗೊಂದಲ ಅಥವಾ ಮರೆವು:** ಪಾಲಿಸಿದಾರರು ನಿಜಕ್ಕೂ ಕೆಲವು ವಿವರಗಳನ್ನು ಪ್ರಸ್ತಾಪ ಮಾಡಲು ಮರೆತಿರುವ ಸಾಧ್ಯತೆ ಇರುತ್ತದೆ. ಇದರ ಜೊತೆಗೆ ಪಾಲಿಸಿದಾರರು ತಮ್ಮ ವೈದ್ಯಕೀಯ ಹಿನ್ನೆಲೆ ಮತ್ತು ಸ್ಥಿತಿಗತಿಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳದೇ ಇರಬಹುದು.

5. **ಅರ್ಜಿ ಭರ್ತಿ ಮಾಡಲು ಇತರರ ನೆರವು:** ಅರ್ಜಿಯನ್ನು ಬೇರೆ ಇನ್ಯಾರೋ ಭರ್ತಿ ಮಾಡಿದ ಸಂದರ್ಭದಲ್ಲಿ ಕೆಲವು ಮಹತ್ವದ ಮಾಹಿತಿ ತಪ್ಪಿಹೋಗಿರುವ ಉದಾಹರಣೆಗಳು ಕೂಡ ಇವೆ. ಅದು ವಿಮಾ ಏಜೆಂಟ್/ಬ್ರೋಕರ್ ಅಥವಾ ಅರ್ಜಿದಾರನ ಸಂಬಂಧಿ ಕೂಡ ಆಗಿರಬಹುದು. ಭಾಷೆಯ ಮಿತಿಯಿಂದಾಗಿ ಅಥವಾ ಅನಕ್ಷರತೆಯ ಕಾರಣದಿಂದ ಅರ್ಜಿ ಭರ್ತಿ ಮಾಡಲು ಸಾಧ್ಯವಾಗದೇ ಇದ್ದಾಗ ಇಂತಹ ಪರಿಸ್ಥಿತಿ ಉಂಟಾಗಬಹುದು.

## ವಾಸ್ತವಾಂಶ ಬಹಿರಂಗಪಡಿಸದೇ ಇರುವುದಂತೆ ತಪ್ಪಿಸುವುದು ಹೇಗೆ?

ವಾಸ್ತಾವಾಂಶಗಳನ್ನು ಬಹಿರಂಗ ಮಾಡದೇ ಇರುವುದಕ್ಕೆ ಕಾರಣಗಳನ್ನು ನಾವು ಗಮನಿಸಿದಾಗ, ಅವುಗಳನ್ನು ಬಹಿರಂಗಪಡಿಸುವುದು ನಿಜಕ್ಕೂ ಅತ್ಯಗತ್ಯ ಹಾಗೂ ನ್ಯಾಯೋಚಿತ ಎಂಬುದನ್ನು ಅರ್ಥಮಾಡಿಕೊಂಡರೆ ಅದನ್ನು ಸುಲಭವಾಗಿ ತಪ್ಪಿಸಬಹುದು. ಇದಕ್ಕಿರುವ ಉತ್ತಮ ಮಾರ್ಗವೆಂದರೆ ಒಪ್ಪಂದದಲ್ಲಿರುವ ಪ್ರತಿಯೊಂದು ಮಾಹಿತಿಯನ್ನೂ ಓದಿ ಅರ್ಥ ಮಾಡಿಕೊಂಡು ಸೂಕ್ತ ಕಾಲಾವಕಾಶ ಪಡೆದು ಭರ್ತಿ ಮಾಡುವುದು. ಕೆಲವು ವಿಚಾರಗಳು ಸ್ಪಷ್ಟವಿಲ್ಲದೇ ಹೋದರೆ ನಿಮ್ಮ ವಿಮಾ ಏಜೆಂಟರಿಂದ ಮಾಹಿತಿಯನ್ನು ಪಡೆದುಕೊಳ್ಳಬಹುದು. ಹಿಂದಿನ ವೈದ್ಯಕೀಯ ಹಿನ್ನೆಲೆಯನ್ನು ನೆನಪಿಟ್ಟುಕೊಳ್ಳಲು ಅವಸರ ಮಾಡುವುದು ಬೇಡ. ನಿಮಗೆ ಆ ಬಗ್ಗೆ ಖಾತರಿ ಇಲ್ಲದೇ ಹೋದರೆ ಹೆಂಡತಿ/ಗಂಡ, ಪಾಲಕರಿಂದ ಮಾಹಿತಿಯನ್ನು ಪಡೆದುಕೊಳ್ಳಬಹುದು. ಈ ವಿಷಯದಲ್ಲಿ ಪ್ರತಿಷ್ಠಿತ ಕಂಪನಿಯ ಅನುಭವಿ ವಿಮಾ ಏಜೆಂಟ್ ಅರ್ಜಿಯನ್ನು ಸರಿಯಾದ ರೀತಿಯಲ್ಲಿ ಭರ್ತಿ ಮಾಡಲು ಸಹಾಯ ಮಾಡಬಹುದು.

**ಬಾಟಮ್‌ಲೈನ್:** ಒಟ್ಟಾರೆಯಾಗಿ ವಿಮಾ ಪಾಲಿಸಿಯಲ್ಲಿ ವಾಸ್ತವಾಂಶಗಳು ಅತ್ಯಂತ ಅಗತ್ಯ. ಇದರಿಂದ ವಿಮಾದಾರರು ಮಾಹಿತಿಪೂರ್ಣವಾದ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ವಿಮಾ ಒಪ್ಪಂದವು ನ್ಯಾಯಸಮ್ಮತವಾಗಿರುವಂತೆ ಖಾತರಿಗೊಳಿಸಲು ಸಾಧ್ಯವಾಗುತ್ತದೆ. ಪ್ರಾದರ್ಶಕತೆ ಮತ್ತು ನಂಬಿಕೆಯನ್ನು ಪೋಷಿಸುವ 'ಅತ್ಯಧಿಕ ನಂಬಿಕೆ'ಯ ಸಿದ್ಧಾಂತಕ್ಕೆ ಪಾಲಿಸಿದಾರರು ಮತ್ತು ವಿಮಾದಾರರು ಬದ್ಧರಾಗಿಬೇಕು. ಹೀಗೆ ಪ್ರತಿಯೊಬ್ಬರೂ ಸೂಕ್ತವಾದ ಮಾಹಿತಿಯನ್ನು ನೀಡಿದರೆ ಪಾಲಿಸಿಯ ಬೆಲೆ ನಿಗದಿಯನ್ನು ಕೂಡ ಸಮರ್ಪಕವಾಗಿ ಮಾಡಲು ಸಾಧ್ಯವಾಗುತ್ತದೆ ಮತ್ತು ಪ್ರತಿಯೊಬ್ಬರಿಗೂ ಒಟ್ಟಾರೆ ಪ್ರೀಮಿಯಂ ಕೈಗೆಟಕುವಂತಿರುತ್ತದೆ. ವಾಸ್ತಾಂಶಗಳನ್ನು ಬಹಿರಂಗ ಪಡಿಸುವಲ್ಲಿ ವಿಫಲವಾದರೆ ಅಗತ್ಯದ ಸಮಯದಲ್ಲಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ, ಹಾಗಾಗಿ ಅದನ್ನು ಯಾವ ಕಾರಣಕ್ಕೂ ಮಾಡಬಾರದು ಎಂಬುದನ್ನು ಅರ್ಜಿದಾರರು ಅರ್ಥ ಮಾಡಿಕೊಳ್ಳಬೇಕು. ಕೊನೆಯದಾಗಿ, ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಮಾತ್ರವಲ್ಲದೆ ಇಡೀ ವಿಮೆಯ ಅಗತ್ಯವನ್ನು ಅರ್ಥ ಮಾಡಿಕೊಳ್ಳುವಲ್ಲಿ, ಸೂಕ್ತವಾದ ವಿಮಾ ಸೌಲಭ್ಯವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಹಾಗೂ ಅಂತಿಮವಾಗಿ ಕ್ಲೈಮ್ ಪ್ರಕ್ರಿಯೆಯಲ್ಲಿ ಒಬ್ಬ ಉತ್ತಮ ವಿಮಾ ಏಜೆಂಟ್ ಅಥವಾ ಬ್ರೋಕರ್ ಜೊತೆಗಿದ್ದರೆ ಹೆಚ್ಚು ಸಹಾಯವಾಗುತ್ತದೆ. ನೀವು ಎಲ್ಲವನ್ನೂ ಆರಾಮವಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ■


ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.

(ARN–79020)

ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ನಮ್ಮ ಸಂಪರ್ಕ: 9148319207, 080–42129917

Mail: info@inspireindiafs.com

ನಮ್ಮ ಸೇವೆಗಳು

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ಫೈನಾನ್ಷಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್
5. ತೆರಿಗೆ ಉಳಿತಾಯ ಬಾಂಡ್‌ಗಳು
6. ವಿಮೆ
7. ವೆಲ್ತ್ ಮ್ಯಾನೇಜ್‌ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ

ವಿಳಾಸ : INSPIRE INDIA WEALTH PVT LTD
@ 65, 'Surasa Enclave', 1st Floor, Puttanna Road,
Gandhi Bazar, Basavanagudi, Bengaluru-560004



ಡಿಸ್ಕ್ಲೈಮರ್

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.